ನಮ್ಮ ಮನೆಗೆ ಬಂದು ಹೇಳಿಸಿಕೊಂಡರೇನೇ ಒಪ್ಪಿಕೋ' ಎಂದ ನನ್ನ ಗಂಡ. ಹಾಗೆಯೇ ಟ್ಯೂಷನ್ ಮಾಡುವುದು ಆರಂಭವಾಯಿತು. ಶೀಘ್ರವೇ ಕಾಲೊನಿಯಲ್ಲಿಯೂ, ಸುತ್ತಮುತ್ತಲಲ್ಲೂ 'ನಾನು ಚೆನ್ನಾಗಿ ಟ್ಯೂಷನ್ ಹೇಳಿಕೊಡುತ್ತೇನೆ,' ಎಂಬ ಮಾತು ವ್ಯಾಪಿಸಿ ಬಹಳ ಜನ ವಿದ್ಯಾರ್ಥಿಗಳು ಬರತೊಡಗಿದರು. ಆದಾಯ ಚೆನ್ನಾಗಿತ್ತು. ಒಂದು ಹಂತದಲ್ಲಿ ರಾಜೇಶ್‌ಗಿಂತ ಹೆಚ್ಚಿನ ಸಂಪಾದನೆ. ಉದ್ಯೋಗವನ್ನು ಬಿಟ್ಟೆ. ಮನೆಯೇ ಒಂದು ಕೋಚಿಂಗ್ ಸೆಂಟರ್ ಆಯಿತು. ಇನ್‌ಕಂ ಟ್ಯಾಕ್ಸ್ ಕಟ್ಟಬೇಕಾಗಿ ಬರುತ್ತದೆಂದೂ, ಚಿನ್ನದ ದರ ಹೆಚ್ಚುತ್ತಲೇ ಇರುವುದೆಂದೂ ಬಿಸ್ಕತ್ತುಗಳನ್ನು ಖರೀದಿಸಿದ. ನಾನೂ ಎರಡು ಒಡವೆಗಳನ್ನು ಮಾಡಿಸಿಕೊಂಡೆ. ಒಂದು ಕಡೆ ಆಕಾಶ್‌ನ ಪಾಲನೆ–ಪೋಷಣೆ, ಮತ್ತೊಂದು ಕಡೆ ಅಡುಗೆ ಇತ್ಯಾದಿ... ಆದರೂ ನನಗೆ ಕೂಡ ತೃಪ್ತಿಯಾಗಿತ್ತು.

ಆಕಾಶ್ ಕಾಲೇಜು ಓದುವ ಸಮಯಕ್ಕೆ ನಮ್ಮ ಮನೆಯ ಮಹಡಿಯ ಮೇಲೆ ಎರಡು ಕೊಠಡಿಗಳನ್ನು ಕಟ್ಟಿಸಿದೆವು. ಉದ್ಯೋಗ ದೊರಕಿದ ನಂತರ ತನ್ನ ಕೊಲೀಗ್ ಅನೂಷಳನ್ನು ಪ್ರೇಮಿಸಿದ್ದೇನೆ ಎಂದ. ಅವರು ಬಹಳ ಶ್ರೀಮಂತರು. ನಿಶ್ಚಿತಾರ್ಥ ನಡೆಯಿತು. ಮದುವೆಯನ್ನೂ ಹತ್ತಿರದಲ್ಲಿಯೇ ಇಟ್ಟುಕೊಂಡರು. ಅವನ ಕೊಠಡಿಗೆ ಬಣ್ಣ ಬಳಿಸಿದೆವು. ಹೊಸ ಫರ್ನಿಚರ್ ಕೊಂಡೆವು.

ಮದುವೆ ವೈಭವದಿಂದ ನಡೆಯಿತು. 'ಅವರಿಗೆ ಸಮನಾಗಿರಬೇಕು' ಎಂದೆನ್ನುತ್ತಾ ರಾಜೇಶ್ ಲಾಕರ್‌ನಲ್ಲಿನ ಚಿನ್ನದ ಬಿಸ್ಕತ್ತುಗಳನ್ನು ಕರಗಿಸಿ, ಆಧುನಿಕವಾದ ವಿನ್ಯಾಸಗಳಲ್ಲಿ ಒಡವೆಗಳನ್ನು ಮಾಡಿಸಿದ್ದನ್ನು ಹೊಸ ಸೊಸೆಗೆ ಇಟ್ಟೆವು. ಘನವಾಗಿ ನಡೆದ ಮದುವೆಯನ್ನು ನೋಡಿ ಅತ್ತೆ, ಮಾವ ಕೂಡ ಬಹಳ ಸಂತೋಷಿಸಿದರು. ಬ್ಯಾಂಕಿನಲ್ಲಿ ತೆಗೆದುಕೊಂಡ ಸಾಲಕ್ಕೆ ನನ್ನ ಒಡವೆಗಳನ್ನು ಇಡಬೇಕಾಗಿ ಬಂದಿದ್ದರಿಂದ ಲಾಕರ್ ಅವಶ್ಯಕತೆ ಕೂಡ ಇಲ್ಲದಾಯಿತು.

'ನೀನು ಟ್ಯೂಷನ್ ನಿಲ್ಲಿಸಬೇಡ. ನಾವು ಸಾಲ ತೀರಿಸಬೇಕಲ್ಲವಾ?' ಎಂದ ರಾಜೇಶ್. ಎಂದಿನಂತೆಯೇ ಅಭ್ಯಂತರ ಹೇಳಲಿಲ್ಲ. ನಿಶ್ಶಬ್ದವಾಗಿ ತಲೆ ಆಡಿಸಿದೆ.

***

ಅನೂಷ ಗರ್ಭಿಣಿ ಆದಳು. ಎಲ್ಲರಿಗೂ ಸಂತೋಷವೇ. ಅವಳಿಗೆ ಇಷ್ಟವಾದ ಕೇಸರಿಭಾತ್ ಮಾಡಿ ಕೊಟ್ಟೆ. 'ಅಬ್ಬ! ಎಷ್ಟು ದಿನಗಳ ನಂತರ ನಮ್ಮ ಮನೆಯಲ್ಲಿ ಪುಟ್ಟ ಮಗುವಿನ ಅಳು ಕೇಳಲಿದ್ದೇವೆ! ಆ ಅದೃಷ್ಟ ಈಗ ಉಂಟಾಗಿದೆ' ಎಂದ ರಾಜೇಶ್. ನನ್ನ ಮನಸ್ಸು ಚಿವುಕ್ ಎಂದೆನಿಸಿತು. ನಾನೊಂದು ಮಗುವನ್ನು ಹೆತ್ತು ಕೊಡಲಾರದೇ ಹೋದೆನೆಂಬ ಅಸಮರ್ಥತೆಯನ್ನು ಎತ್ತಿ ತೋರಿಸಿದಂತಾಯಿತು. ನನ್ನ ಆಲೋಚನೆಗಳು ಗತದೊಳಕ್ಕೆ ಹೋದವು.

ಮದುವೆಯಾದ ಮೂರು ವರ್ಷದವರೆಗೂ ಗರ್ಭಿಣಿ ಆಗದಿದ್ದುದರಿಂದ ನನ್ನನ್ನು ಡಾಕ್ಟರುಗಳಿಗೆ ತೋರಿಸಿದರು. ನನ್ನಲ್ಲಿ ಏನೂ ಲೋಪವಿಲ್ಲವೆಂದು ಹೇಳಿದರು. ಅತ್ತೆ ನೊಂದುಕೊಳ್ಳುತ್ತಿದ್ದರೆ, 'ನಮಗೆ ಆಕಾಶ್ ಇದ್ದಾನೆ. ಸಾಕಲ್ಲವೇ. ಈ ದಿನಗಳಲ್ಲಿ ಎಷ್ಟು ಜನ ಒಂದು ಸಂತಾನದೊಂದಿಗೇ ಆನಂದದಿಂದ ಇಲ್ಲವೇನು?' ಎಂದು ಸಾಂತ್ವನಗೈದೆ. ನಿಜಕ್ಕೂ ನನಗೊಂದು ಮಗು ಬೇಕೆಂದು ಎಂದಿನಿಂದಲೋ ಬಯಕೆ. ಅದು ತೀರಲೇ ಇಲ್ಲ.

ಅನೂಷಳಿಗೆ ಡಾಕ್ಟರುಗಳು ಬೆಡ್ ರೆಸ್ಟ್ ಬೇಕೆಂದರು. ಹತ್ತು ದಿನ ರಜೆ ಹಾಕಿದಳು. ಆ ನಂತರ ಮನೆಯಿಂದ ಕೆಲಸ ಮಾಡಲು ಆಕೆಯ ಆಫೀಸ್ ಅನುಮತಿಸಿತು. ಎಲ್ಲವನ್ನೂ ಮೇಲೆ ತೆಗೆದುಕೊಂಡು ಹೋಗಿ ನೀಡುವ ಹೆಚ್ಚಿನ ಹೊಣೆಗಾರಿಕೆ ನನ್ನ ಮೇಲೆ ಬಿದ್ದಿತು.

ಪಾಪ ಅನೂಷ. 'ನಿಮಗೆ ನನ್ನಿಂದ ಬಹಳ ಶ್ರಮ ಆಗುತ್ತದೆ ಅತ್ತೆ' ಎಂದಳು. ಆ ಮಾತುಗಳನ್ನು ಕೇಳಿ ಆಕಾಶ್, 'ನಿನಗೆ ಅಮ್ಮನ ವಿಷಯ ತಿಳಿಯದು. ನಮಗೆ ಸೇವೆ ಮಾಡುವುದರಲ್ಲಿಯೇ ಆಕೆಗೆ ಆನಂದ. ನೀನು ಕಾಲು ಒತ್ತೆಂದರೂ ಸಂತೋಷದಿಂದ ಮಾಡುತ್ತಾಳೆ. ಚಿಕ್ಕಂದಿನಲ್ಲಿ ಹಾಗೆ ನಾನು ಬಹಳ ಮಾಡಿಸಿಕೊಂಡಿದ್ದೇನೆ' ಎಂದ ಅವನು ನನ್ನತ್ತ ಪ್ರೀತಿಯಿಂದ ನೋಡುತ್ತಾ. ಏಕೋ ನನಗೆ ಅದು ಹೊಗಳಿಕೆ ಎನ್ನಿಸಲಿಲ್ಲ. ಛೇ... ನಾನು ತಪ್ಪಾಗಿ ಯೋಚಿಸುತ್ತಿರುವೆನಾ ಎಂದೆನಿಸಿತು.

ಅನೂಷಳ ತಾಯಿ ತಂದೆಯರು ಏಳನೇ ತಿಂಗಳಲ್ಲಿ ಬಂದು ಸೀಮಂತ ಮಾಡಿ, ಅವರ ಚಿಕ್ಕ ಮಗನ ಗ್ರಾಜ್ಯುಯೇಷನ್ ಇದೆಯೆಂದು ಆರು ತಿಂಗಳ ಕಾಲ ಅಮೆರಿಕೆಗೆ ಹೊರಟುಹೋದರು. ಹೆರಿಗೆಯ ಹೊಣೆಯೆಲ್ಲಾ ನಮ್ಮ ಮೇಲೆ ಬಿದ್ದಿತು. ಅನೂಷಳಿಗೆ ಸಹಾಯವಾಗಿರಲು ನಮ್ಮ ಬೀಗಿತ್ತಿ (ಅನೂಷಳ ಚಿಕ್ಕಮ್ಮ) ಬಂದಳು. ನನಗೆ ಸ್ವಲ್ಪ ಶ್ರಮ ಕಡಿಮೆಯಾಯಿತು. ಆದರೆ ಆಕೆಯ ಮಾತುಗಳನ್ನು ಸಹಿಸಲಾರದಾದೆ. ನನ್ನ ಕುಟುಂಬದ ಬಗ್ಗೆ, ಹಣದ ಬಗ್ಗೆ, ಮುಖ್ಯವಾಗಿ ನನ್ನ ಕುಲದ ಬಗ್ಗೆ ಪದೇಪದೇ ಕೇಳುತ್ತಿದ್ದಳು. ತಮ್ಮವರ ಬಗ್ಗೆ ಹೆಮ್ಮೆಯ ವಿಷಯಗಳನ್ನು ಹೇಳುತ್ತಿದ್ದಳು.

***

ಅನೂಷಳಿಗೆ ಹೆಣ್ಣು ಮಗು ಹುಟ್ಟಿತು. ಆಸ್ಪತ್ರೆಗೆ ಹೋದೆ. ಪಾಪ ಮುದ್ದಾಗಿ, ಗುಂಡಾಗಿತ್ತು. ಎತ್ತಿಕೊಳ್ಳಲು ಹೋದರೆ ಅನೂಷಳ ಚಿಕ್ಕಮ್ಮ 'ಅತ್ತೂ ಅತ್ತೂ ಈಗಲೇ ನಿದ್ರೆ ಮಾಡಿದ್ದಾಳೆ. ಡಿಸ್ಟರ್ಬ್ ಮಾಡಬೇಡಿ' ಎಂದಳು. ಆಕೆಯ ಮಾತುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಮಗುವನ್ನು ಕೈಗೆತ್ತಿಕೊಳ್ಳಲು ಹೋದೆ.

'ಬೇಡ ಅನ್ನಲಿಲ್ವಾ?' ಎಂದಳು ಅವಳು ಕಟುವಾಗಿ. ಅವಾಕ್ಕಾದೆ. ನನ್ನ ಮೊಮ್ಮಗಳನ್ನು ನಾನೆತ್ತಿಕೊಳ್ಳಕೂಡದೆಂದು ಹೇಳಲು ಆಕೆ ಯಾರು? ಕನಿಷ್ಠ ನನ್ನ ಸ್ವಂತ ಬೀಗಿತ್ತಿ ಕೂಡ ಅಲ್ಲ.

ನನ್ನ ಗಂಡನ ಕಡೆ ನೋಡಿದೆ. ಅವನು ಮಾತಾಡದೇ ತಲೆ ತಿರುಗಿಸಿಕೊಂಡ. ಮರಳಿ ಮನೆಗೆ ಬಂದುಬಿಟ್ಟೆ. ಎರಡು ದಿನಗಳ ನಂತರ ಅವರು ಆಸ್ಪತ್ರೆಯಿಂದ ಮನೆಗೆ ಬಂದರು. ಆರತಿ ಮಾಡಿದೊಡನೆ ಮಗಳನ್ನು ಎತ್ತಿಕೊಂಡು ಅನೂಷ ಮಹಡಿಗೆ ಹೊರಟುಹೋದಳು. ಮೊಮ್ಮಗಳನ್ನು ನೋಡಲು ಹಳ್ಳಿಯಿಂದ ಅತ್ತೆ, ಮಾವ ಬಂದರು. ಅವರು ಮೇಲೆ ಹತ್ತಲಾರರೆಂದು ಎಳೆಯ ಮಗುವನ್ನು ಕರೆತರಲು ಮಹಡಿಯ ಮೇಲೆ ಹೋದೆ.

'ಮಾತಾಡಿದ್ರೆ ಪಾಪುವನ್ನು ಎತ್ತಿಕೊಳ್ಳುತ್ತೇನೆ ಎನ್ನುತ್ತಾಳೆ. ಎಳೆಕೂಸನ್ನು ಎತ್ತಿಕೊಳ್ಳುವುದು ಆಕೆಗೇನು ಗೊತ್ತು? ಅದರಲ್ಲೂ ಕಡಿಮೆ ಕುಲದವಳು. ನೀನು ಜಾಗ್ರತೆಯಿಂದ ಇರಬೇಕಮ್ಮಾ,' ಎನ್ನುತ್ತಿದ್ದಳು ಅನೂಷಳ ಚಿಕ್ಕಮ್ಮ.

'ಅದೇನು ಚಿಕ್ಕಮ್ಮ... ಹಾಗೆ ಮಾತಾಡುತ್ತೀ? ನಾಳೆ ಆಕೆ ತಾನೇ ಮಗುವನ್ನು ನೋಡಿಕೊಳ್ಳುವುದು?'

'ಒಳ್ಳೆಯ ಆಯಾಳನ್ನು ಇಟ್ಟುಕೋ. ಸಂಪಾದಿಸುತ್ತಿರುವೆಯಲ್ಲಾ' ಎನ್ನುತ್ತಿದ್ದಳು ಚಿಕ್ಕಮ್ಮ, ನನ್ನ ಮಗನ ಹೆಂಡತಿ, 'ಸರಿ, ಸರಿ' ಎನ್ನುತ್ತಿದ್ದಳು. ಕೆಳಗೆ ಬಂದುಬಿಟ್ಟು ಅತ್ತೆಯ ಮಡಿಲಲ್ಲಿ ತಲೆಯಿಟ್ಟುಕೊಂಡು ಜೋರಾಗಿ ಅತ್ತುಬಿಟ್ಟೆ.

ನಾನೇಕೆ ಅತ್ತೆನೆಂದು ಆಕೆಗೆ ಅರ್ಥವಾಗಲಿಲ್ಲ. 'ಏನಮ್ಮಾ? ಏನಾಯಿತು?' ಎಂದು ಸಮಾಧಾನಪಡಿಸತೊಡಗಿದರು. ಸರಿಯಾಗಿ ಆ ಸಮಯಕ್ಕೆ ನಮ್ಮ ಮಾವನವರು ಒಳಗೆ ಪ್ರವೇಶಿಸಿದರು. ನನ್ನ ಜೀವನದ ಮೂರನೆಯ ಪ್ರಯಾಣದತ್ತ ಕರೆದೊಯ್ದ ಘಟನೆ ಅದೇ.

***

ಅತ್ತೆಯ ಮಡಿಲಲ್ಲಿ ಅತ್ತು ಅತ್ತು ನಾನು ಮಾಮೂಲೀ ಮನುಷ್ಯಳಾದಾಗ ಮಾವನವರು 'ನಿನ್ನೊಂದಿಗೆ ಸ್ವಲ್ಪ ಮಾತಾಡಬೇಕಮ್ಮಾ,' ಎಂದರು. ನಾನು ಆಶ್ಚರ್ಯಪಟ್ಟೆ. ಏನು ಮಾತಾಡುವರೆಂದು ತಿಳಿಯದು. ಆತ ಹೇಳಿದ್ದು ಪೂರ್ತಿಯಾಗಿ ಕೇಳಿಸಿಕೊಂಡೆ. ದುಃಖಕ್ಕಿಂತ ದೊಡ್ಡ ಸ್ಥಿತಿ. ಮನಸ್ಸು ಸ್ತಂಭಿಸಿಹೋಗುವುದು!

'ನಿನ್ನ ನಿರ್ಧಾರ ಹೇಳಮ್ಮ, ಈ ರಾತ್ರಿಗೆ ನಾವು ಹೊರಟುಬಿಡುತ್ತಿದ್ದೇವೆ' ಎಂದರು ಮಾವ. ನನ್ನ ನಿರ್ಧಾರ ಹೇಳಿದೆ.

ಅವರು ಹೊರಟುಬಿಡುವರೆಂದು ತಿಳಿದು, 'ಅದೇನಪ್ಪಾ! ಮಗುವಿನ ನಾಮಕರಣದವರೆಗೂ ಇರಿ. ಸಂಭ್ರಮವನ್ನು ನೋಡುವುದಿಲ್ಲವಾ?' ಎಂದ ರಾಜೇಶ್.

'ಅಗತ್ಯ ಇಲ್ಲವೋ. ನಾವು ಮಾತ್ರ ಅಲ್ಲ, ಸೊಸೆ ಕೂಡ ನಮ್ಮ ಜೊತೆ ಬರುತ್ತಿದ್ದಾಳೆ.'

ರಾಜೇಶ್ ದಿಗ್ಭ್ರಾಂತಿ ಹೊಂದಿದಂತೆ ನೋಡಿದ. ಅವನಿಗೆ ಅರ್ಥವಾಗಲಿಲ್ಲ. 'ಮನೆಯಲ್ಲಿ ಎಲ್ಲರೂ ಒಟ್ಟಿಗೇ ಸೇರಿ ವಿನೋದವಾಗಿ ಮಾಡುವ ಫಂಕ್ಷನ್ ಇದು. ಬಹಳ ಕೆಲಸಗಳಿರುತ್ತವೆ' ಎಂದ.

'ಹಾಗಾದರೆ ನೀನು ನಿನ್ನ ಹೆಂಡತಿಯನ್ನು ಇರು ಎನ್ನುತ್ತಿರುವುದು ಕೆಲಸ ಮಾಡುವುದಕ್ಕೇನು ರಾಜೇಶ್?' ಕಟುವಾಗಿ ಹೇಳಿದರು ಮಾವ. ನಾನು ಆಶ್ಚರ್ಯದಿಂದ ನೋಡುತ್ತಿದ್ದೆ. ಮಾವ ಅಷ್ಟು ಕಟುವಾಗಿ ಮಾತಾಡಿದ್ದನ್ನು ನಾನೆಂದೂ ನೋಡಿರಲಿಲ್ಲ.

'ಸ್ವಂತ ಮನೆಯಲ್ಲಿ ಕೆಲಸ ಮಾಡುವುದು ಚಾಕರಿ ಏನು?' ಎಂದಳು ಅನೂಷಳ ಚಿಕ್ಕಮ್ಮ. ಮಾವ ಆಕೆಯ ಕಡೆ ಕೂಡ ನೋಡಲಿಲ್ಲ. ರಾಜೇಶ್‌ನೊಂದಿಗೆ, 'ಆಕೆಯನ್ನು ಬಂಜೆ ಎಂದು ನೀನೂ, ನಿನ್ನ ಚಿಕ್ಕತ್ತೆಯೂ ಚುಚ್ಚಿ ಹೇಳಿದಿರಂತೆ.